# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೆರಡನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

**ಗುರುವಾರ, ದಿನಾಂಕ:15ನೇ ಫೆಬ್ರವರಿ, 2024**

**(ಸಮಯ: ಬೆಳಗ್ಗೆ 10.00 ಗಂಟೆಗೆ)**

* * *

### 01. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

"2024ನೇ ಫೆಬ್ರವರಿ, 12ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ದಿನಾಂಕ:13.02.2024ರಂದು **ಶ್ರೀ ಯು.ಬಿ. ವೆಂಕಟೇಶ್** ರವರು ಸೂಚಿಸಿದ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

ಎರಡನೇ ದಿನ

### 02. ವರದಿಯನ್ನೊಪ್ಪಿಸುವುದು

**ಶ್ರೀ ಎನ್. ರವಿಕುಮಾರ್ (ಅಧ್ಯಕ್ಷರು, ಕ್ಲಬ್ ವಿಶೇಷ ಸದನ ಸಮಿತಿ)** ಅವರು ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ವಿಶೇಷ ಸದನ ಸಮಿತಿಯ ವರದಿಯನ್ನೊಪ್ಪಿಸುವುದು.

### 03. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಮೂರನೆಯ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಮೂರನೆಯ ಪಟ್ಟಿ

### 04. ಶೂನ್ಯವೇಳೆ ಪ್ರಸ್ತಾವಗಳು

..2..

## 05. ಗಮನ ಸೆಳೆಯುವ ಸೂಚನೆಗಳು

01. **ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಶ್ರೀ ಶಾಂತರಾಮ್ ಬುಡ್ನ ಸಿದ್ದಿ, ಡಾ: ತಳವಾರ್ ಸಾಬಣ್ಣ, ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. ಹಾಗೂ ಶ್ರೀ ಮುನಿರಾಜು ಗೌಡ ಪಿ.ಎಂ. ಅವರುಗಳು** ರಾಜ್ಯದಲ್ಲಿ ಇತ್ತೀಚೆಗೆ ಕೊಲೆ, ಕೋಮು ಗಲಭೆ, ಅತ್ಯಾಚಾರ, ಅಪರಾಧ ಕೃತ್ಯಗಳು ಮತ್ತು ಮಾರಣಾಂತಿಕ ಹಲ್ಲೆ ಪ್ರಕರಣಗಳು ಹೆಚ್ಚಾಗಿದ್ದು, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುವುದು.

02. **ಶ್ರೀ ಡಿ.ಎಸ್. ಅರುಣ್** ಅವರು ಕಳೆದ 15 ವರ್ಷಗಳ ಹಿಂದೆ ಬೆಂಗಳೂರಿನ ಮಿಷನ್ ರಸ್ತೆಯಲ್ಲಿ ಫ್ಲೈಓವರ್ ನಿರ್ಮಿಸಲು ವಶಪಡಿಸಿಕೊಂಡ ಭೂಮಿಯ ಮಾಲೀಕರಿಗೆ ಪರಿಹಾರ (T.D.R) ನೀಡುವಲ್ಲಿ ವಿಳಂಬ ಹಾಗೂ ತೊಂದರೆಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯುವುದು.

03. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ನೋಂದಾಯಿತ "ಎ" ಮತ್ತು "ಬಿ" ದರ್ಜೆ ದೇವಾಲಯಗಳಲ್ಲಿ ಭಕ್ತರಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದಿರುವುದು ಹಾಗೂ ದೇವಾಲಯಗಳ ಭದ್ರತೆ ಮತ್ತು ಸುರಕ್ಷತೆಗೆ ಸರ್ಕಾರ ಸೂಕ್ತ ಕ್ರಮ ವಹಿಸದಿರುವ ಕುರಿತು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆಯುವುದು.

04. **ಶ್ರೀ ಯು.ಬಿ. ವೆಂಕಟೇಶ್** ಅವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳಿಗೆ ಎರಡೆರಡು ಬಾರಿ ಬಿಲ್ ಪಾವತಿಯಾಗಿರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಕುರಿತು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯುವುದು.

## 06. ನಿಯಮ 330ರ ಮೇರೆಗೆ

01. **ಶ್ರೀಯುತರುಗಳಾದ ಮರಿತಿಬ್ಬೇಗೌಡ, ಎಸ್.ಎಲ್. ಭೋಜೇಗೌಡ ಹಾಗೂ ಎಸ್.ವ್ಹಿ. ಸಂಕನೂರ** ಅವರುಗಳು ರಾಜ್ಯದಲ್ಲಿನ ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಸಂದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಸರಳೀಕರಿಸಿರುವ ಮಾರ್ಗಸೂಚಿಗಳನ್ನು ಪೂರೈಸಿರುವ ಶಾಲೆಗಳಿಗೆ ಹತ್ತು ವರ್ಷಕ್ಕೊಮ್ಮೆ ನವೀಕರಿಸುವಂತೆ ಆದೇಶ ಹೊರಡಿಸದಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆಯ ಕುರಿತು ಪ್ರಸ್ತಾಪಿಸುವುದು.

02. **ಶ್ರೀಯುತರುಗಳಾದ ಛಲವಾದಿ ಟಿ. ನಾರಾಯಣಸ್ವಾಮಿ ಹಾಗೂ ನಿರಾಣಿ ಹಣಮಂತ ರುದ್ರಪ್ಪ** ಅವರುಗಳು ಹಿಂದುಳಿದ ವರ್ಗಗಳ ವಸತಿ ಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಕಲಿಕೆ ಮಾಡುತ್ತಿರುವ ಸಾವಿರಾರು ವಿದ್ಯಾರ್ಥಿಗಳು ಸಂಕಷ್ಟದಲ್ಲಿರುವ ಕುರಿತು ಪ್ರಸ್ತಾಪಿಸುವುದು.

..3..

## 07. ಅರ್ಧ ಗಂಟೆ ಕಾಲಾವಧಿ ಚರ್ಚೆ

ಅಧ್ಯಕ್ಷ/ಉಪಾಧ್ಯಕ್ಷ ಮೀಸಲಾತಿ ಬಗ್ಗೆ ದಿನಾಂಕ:13.02.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:01(60)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಎಂ.ಎಲ್. ಅನಿಲ್ ಕುಮಾರ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**

**www.kla.kar.nic.in/council/council.htm**